**<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**<u>ಸಿ.ಸಿ. ಸಂಖ್ಯೆ:456/2020</u>**

**ಸಾಕ್ಷಿಯನ್ನು ದಿಃ 07.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಲಕ್ಷ್ಮೀಕುಮಾರ ಎನ್ | ಸಿಡಬ್ಲ್ಯೂ:3 | ಪಿಡಬ್ಲ್ಯೂ:2 |
| ತಂದೆಯ ಹೆಸರು | ನರಸಿಂಹಯ್ಯ ಎನ್ | | |
| ವಯಸ್ಸು | 42 ವರ್ಷ | | |
| ಉದ್ಯೋಗ | ಮಾಜಿ ಸೈನಿಕ ಮತ್ತು ದ್ವಿತೀಯ ದರ್ಜೆ ಸಹಾಯಕ, ಬಿ ಸಿ ಎಂ ಇಲಾಖೆ, | | |
| ವಾಸಸ್ಥಳ | ಮಾರುತಿ ಬಡಾವಣೆ, ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಸಾಕ್ಷಿ ನಿಪಿ 2 ರ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 08.10.2020 ರಂದು ಚಾಸಾ 1 ರವರ ಮನೆಯಲ್ಲಿ ಮಾಡಿದ್ದೇನೆ. ಅವರ ಮನೆಯಲ್ಲಿ ಕಳ್ಳತನವಾದ ಬಗ್ಗೆ ಪೊಲೀಸರು ಮಾಡಿದ ಮಹಜರಿಗೆ ಸಹಿ ಹಾಕಿದ್ದೇನೆ. ನನ್ನ ಜೊತೆ ಚಾಸಾ 1 ಮತ್ತು 2 ರವರು ಇದ್ದರು. ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಮಹಜರು ಮಾಡಿದರು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀಸವಾಲು ಸಸಅ ರವರಿಂದಃ–</u>**

ಮಹಜರನ್ನು 2019 ರಲ್ಲಿ ಮಾಡಲಾಗಿದೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎನ್ ಪಿ ಪರ ಶ್ರೀ ಪಿ ಎಂ ಪಿ ವಕೀಲರಿಂದಃ</u>**

ದಿನಾಂಕ 08.09.2019 ರಂದು ಮಹಜರು ಮಾಡಿದ್ದಾರೆ. ಮಹಜರನ್ನು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಮಾಡಿದ್ದಾರೆ. ಮಹಜರಿಗೆ ಬರುವಂತೆ ಪೊಲೀಸರು ನೋಟೀಸು ಕೊಟ್ಟಿಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ ಎಂದರೆ ಓದಿ ಸಹಿ ಹಾಕಿದ್ದೇನೆ. ಮಹಜರು ಸ್ಥಳದ ಉತ್ತರಕ್ಕೆ ಖಾಲಿ ನಿವೇಶನ, ಪಶ್ಚಿಮಕ್ಕೆ ರಸ್ತೆ ನಂತರ ಮನೆ, ದಕ್ಷಿಣಕ್ಕೆ ರಸ್ತೆ ನಂತರ ಖಾಲಿ ನಿವೇಶನ ಮತ್ತು ಪೂರ್ವಕ್ಕೆ ಮನೆಯಿದೆ. ಚಾಸಾ 1 ನನ್ನ ನೆರೆಹೊರೆಯವರು. ಚಾಸಾ 2 ಪಕ್ಕದ ಬೀದಿಯವರು. ನನಗೆ ಪರಿಚಿತರು. ಚಾಸಾ 1 ರವರ ಕೋರಿಕೆಯ ಮೇರೆಗೆ ಮಹಜರಿಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.